3. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ಪುತ್ತೂರಿನಲ್ಲಿರುವ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿ ಮೂಲ ಸೌಕರ್ಯದ ಕೊರತೆ ಬಗ್ಗೆ.

ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು): ಮಾನ್ಯ ಅಧ್ಯಕ್ಷರೆ, ಅಲ್ಲಿ ಮಕ್ಕಳು ದೊಡ್ಡಿಯಲ್ಲಿದ್ದಂತೆ ಇದ್ದಾರೆ. ಮಲಗುವುದಕ್ಕೆ ಜಾಗವಿಲ್ಲ. ಮೊನ್ನೆ ಸೋಮವಾರದ ದಿವಸ ಅಧಿಕಾರಿಗಳು ಹೋಗಿ 6ನೇ ತರಗತಿಗೆ ಅಡ್ಮಿಷನ್ ಆದಂಥ ಮಕ್ಕಳನ್ನು ಅವರವರ ಊರಿಗೆ ಕರೆದುಕೊಂಡು ಹೋಗುವುದಕ್ಕೆ ಆದೇಶ ಮಾಡಿದರು. ಅವರೇ ಅದನ್ನು ಕೊಟ್ಟಿದ್ದು. ಆದರೆ ಮತ್ತೆ ವಾಪಸ್ ಅಲ್ಲಿ ಅಧಿಕಾರಿಗಳು ಹೋಗಿ ಅಲ್ಲೇ ಇರಲಿ ಎಂದು ಹೇಳಿದರೆಂದು ಗೊತ್ತಾಯಿತು. ಒಂದು ತಿಂಗಳಲ್ಲಿ ಹೊಸ ಕಟ್ಟಡಕ್ಕೆ ಶಿಫ್ಟ್ ಮಾಡುತ್ತಾರೆಂದು ಗೊತ್ತಾಯಿತು.

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದೇವೆ. ಸ್ವಂತ ಜಾಗವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಾಡಿಗೆ ಕಟ್ಟಡದಲ್ಲಿ 250 ಮಕ್ಕಳಿಗೆ ಅವಕಾಶವಿಲ್ಲವೆಂದ ಮೇಲೆ 6ನೇ ತರಗತಿ ಮಕ್ಕಳಿಗೆ ಪ್ರವೇಶ ಕೊಡಬೇಡಿ ಅಥವಾ ಬೇರೆ ಕಟ್ಟಡ ತೆಗೆದುಕೊಂಡು ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಮಾನ್ಯ ಶಾಸಕಿಯವರು ಮೊನ್ನೆ ಹೇಳಿದ ಮೇಲೆ ಪ್ರವೇಶವನ್ನು ಕೊಟ್ಟು ಮತ್ತೊಂದು ಹೊಸ ಕಟ್ಟಡವನ್ನು ತೆಗೆದುಕೊಂಡು ಆ ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡಿ ಎಂದು ಆದೇಶ ಮಾಡಿದ್ದೇನೆ.

(ಶೂನ್ಯ ವೇಳೆ ಸಮಯದಲ್ಲಿ ವಿಷಯ ಪ್ರಸ್ತಾಪ ಮಾಡಬೇಕಿದ್ದ ಮಾನ್ಯ ಸದಸ್ಯರುಗಳಾದ ಶ್ರೀ ಕೆ. ಆರ್. ರಮೇಶ್‌ಕುಮಾರ್ ಮತ್ತು ಶ್ರೀ ಕೆ. ಶಿವಮೂರ್ತಿಯವರು ಹಾಜರಿರಲಿಲ್ಲ.)

2. ವಿಷಯ: ಮಂಟನಕುರ್ಚಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ ವೈದ್ಯರನ್ನು ವರ್ಗಾವಣೆ ಮಾಡುವ ಬಗ್ಗೆ.